Os No. 2749/2013
PW 1

ಸಾಕ್ಷಿಯನ್ನು ಈಹೊತ್ತು ದಿನಾಂಕ ಃ 30.05.2019 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು .

ಮುಂದುವರೆದ ಪಾಟೀಸವಾಲು ಃ ಪ್ರತಿವಾದಿಯರ ಪರ ಶ್ರೀ ಎಸ್ ಡಿ ಎಂ ವಕೀಲರಿಂದ ಃ

ನಾನು ದಾವಾ ಹಾಕುವಾಗ ಬೆಂಗಳೂರಿನಲ್ಲಿ ಇದ್ದೆನು ಈಗ ಹೊಸೂರಿನಲ್ಲಿ ವಾಸವಿದ್ದೇನೆ. ಈಗ ತಮಿಳುನಾಡಿನ ಹೊಸೂರಿನಲ್ಲಿ ವಾಸ ಮಾಡುತ್ತಿದ್ದ ಬಗ್ಗೆ ದಾಖಲೆ ಅಂದರೆ ವಾಸ ಪತ್ರ ಇದೆ . ನನ್ನ ತಾಯಿ ತೀರಿಕೊಂಡ ವರ್ಷ ನನ್ನ ಒಬ್ಬಳ ಮದುವೆ ಮಾತ್ರ ಆಗಿತ್ತು . ನನ್ನ ಅಣ್ಣ ಕೃಷ್ಣ ಪ್ರಸಾದ್ ರವರ ಮದುವೆಗಿಂತ ಮುಂದೆ ನನ್ನ ಮೂರು ಜನ ಸಹೋದರಿಯರ ಮದುವೆಯಾಗಿತ್ತು ಎಂದರೆ ಸರಿಯಲ್ಲ. ಪುನಃ ಹೇಳುತ್ತೇನೆ ನನ್ನ ಅಣ್ಣನ ಮದುವೆಗಿಂತ ಮೊದಲು ನನ್ನ ಮತ್ತು ನನ್ನ ತಂಗಿ ಪದ್ಮಿಣಿರವರ ಮದುವೆಯಾಗಿತ್ತು . ನನ್ನ ಅಣ್ಣ ಕೃಷ್ಣ ಪ್ರಸಾದ್ ರವರಿಗೆ ಕೆಲಸ ಸಿಕ್ಕಾಗ ಅಂದರೆ 1971 ರಲ್ಲಿ ನಾವು ಎಲ್ಲರೂ ದಾವಾ ಮನೆಯಲ್ಲಿ ಇದ್ದೆವು . ಸನ್ 1978 ರಲ್ಲಿ ನನ್ನ ತಂದೆಗೆ ನಾಸಿಕ್‌ಗೆ ಶಿಪ್ಟ್ ಆದರು . ಆ ವೇಳೆಯಲ್ಲಿ ಬೆಂಗಳೂರಿನ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದರು ಎಂದರೆ ಸರಿ. ಬೆಂಗಳೂರಿನ ಮನೆಯಲ್ಲಿನ ಸಾಮಾನುಗಳನ್ನು ನಾನು ತೆಗೆದುಕೊಂಡು ಹೋಗಿಲ್ಲ. ದಾವಾ ಐಟಂ 2 ನೇ ಆಭರಣಗಳು ನನ್ನ ತಂದೆಯ ಹತ್ತಿರ ಇದ್ದ ಬಗ್ಗೆ ದಾಖಲೆಗಳು ಇರುವುದಿಲ್ಲ. ಸದರಿ ಆಭರಣಗಳನ್ನು ನಾನೇ ತೆಗೆದುಕೊಂಡಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆಯು ತೀರಿಕೊಂಡು ಅಂತಿಮ ಕ್ರಿಯೆ ನಡೆದ ಮೂರು ದಿನದ ನಂತರ ನಾನು ನಾಸಿಕ್‌ಗೆ ಹೋಗಿದ್ದೆನು . ನನ್ನ ತಂದೆ ತೀರಿಕೊಂಡ ಬಗ್ಗೆ ಮಾಹಿತಿಯನ್ನು ಕೊಟ್ಟಿಲ್ಲ. ಒಂದು ದಿನದ ನಂತರ

ನನ್ನ ಅಣ್ಣ ಮಾಹಿತಿ ಕೊಟ್ಟಿದ್ದರು . ನನ್ನ ತಂದೆಯ ಅಂತಿಮ ಕ್ರಿಯೆಗೆ ನನ್ನ ಉಳಿದ ಸಹೋದರಿಯರಿಗೂ ಸಹ ಹೋಗಿರಲಿಕ್ಕೆ ಆಗಲಿಲ್ಲ.

ದಾವಾ ಷೆಡ್ಯೂಲ್ 1 ನೇ ಐಟಂ ಆಸ್ತಿಯು ನಮ್ಮ ತಂದೆಗೆ 1949 ರಲ್ಲಿ ಮಂಜೂರು ಆಗಿತ್ತು ಎಂದರೆ ಸರಿ . ಸಾಕ್ಷಿಗೆ ಆ ಬಗ್ಗೆ ಮಂಜೂರಾದ ಪತ್ರವನ್ನು ತೋರಿಸಲಾಗಿ ಸರಿ ಎಂದು ಹೇಳುತ್ತಾರೆ ಅದನ್ನು ನಿಡಿ 1 ಎಂದು ಗುರುತಿಸಲಾಯಿತು . ಅದರಂತೆ ದಿ : 16.05.1953 ರಂದು ಸದರಿ ಆಸ್ತಿಯ ಸ್ವಾಧೀನ ಕೊಟ್ಟಿರುತ್ತಾರೆ ಎಂದರೆ ಸರಿ . ಈಗ ಸದರಿ ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಒಪ್ಪಿದ್ದರಿಂದ ಅದನ್ನು ನಿಡಿ 2 ಎಂದು ಗುರುತಿಸಲಾಯಿತು . ಆದರೆ ಸಾಕ್ಷಿಯು ಅದರ ಮೇಲಿರುವ ಸಹಿಯು ತಂದೆಯದು ಅಲ್ಲ ಎಂದು ಹೇಳುತ್ತಾರೆ . ಅದು ನನ್ನ ತಂದೆಯ ಸಹಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಸಹಿ ಮಾಡಿದ ಯಾವುದೇ ದಾಖಲೆಗಳು ನನ್ನ ಬಳಿ ಇರುವುದಿಲ್ಲವಾದ್ದರಿಂದ ಹಾಜರುಪಡಿಸಿಲ್ಲ. ನನ್ನ ತಂದೆಯವರಿಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸರಿ . ನನ್ನ ತಂದೆಯವರು ಡೈರಿ ಬರೆಯುತ್ತಿರಲಿಲ್ಲ ದೇವರ ನಾಮ ಇತ್ಯಾದಿ ದಿನಚರಿ ಬರೆಯುತ್ತಿದ್ದರು . ನನ್ನ ತಂದೆಯ ಕೈಬರಹವನ್ನು ನೋಡಿದರೆ ಗುರುತಿಸುತ್ತೇನೆ. ಈಗ ನನಗೆ ತೋರಿಸುತ್ತಿರುವ ದಾಖಲೆ ಮಾರ್ಟ್ ಗೇಜ್ ಡೀಡ್ ಆಗಿದ್ದು ಅದನ್ನು ನನ್ನ ತಂದೆ ಮೈಸೂರು ಸೆಂಟ್ರಲ್ ಕೋ-ಆಪರೇಟಿವ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಎಂದರೆ ಸರಿ . ಸದರಿ ದಾಖಲೆಯನ್ನು ನಿಡಿ 3 ಎಂದು ಗುರುತಿಸಲಾಯಿತು . ಸದರಿ ದಾಖಲೆಯ 2 ನೇ ಪುಟದಲ್ಲಿ ಅವರ ಎರಡು ಸಹಿಗಳು ಇರುತ್ತದೆ

ಎಂದರೆ ಸರಿ . ಸದರಿ ಸಹಿಗಳನ್ನು ನಿಡಿ 3 ಎ ಮತ್ತು 3 ಬಿ ಎಂದು ಗುರುತಿಸಲಾಯಿತು . 1953 ರಲ್ಲಿ ನನ್ನ ತಂದೆ ಸದರಿ ಬ್ಯಾಂಕಿಗೆ ಮಾರ್ಟ್ ಗೇಜ್ ಡೀಡ್ ಮಾಡಿದ ಬಗ್ಗೆ ಇನ್ನೊಂದು ದಾಖಲೆಯನ್ನು ನೋಡಿದ್ದು ಅದನ್ನು ನಿಡಿ 4 ಎಂದು ಗುರುತಿಸಲಾಯಿತು. ಸಾಕ್ಷಿಯು ತಂದೆಯ ಸಹಿಗಳನ್ನು ನಿಡಿ 4 ಎ ಮತ್ತು ಬಿ ಎಂದು ಗುರುತಿಸಲಾಯಿತು. ಸನ್ 1950 ರಲ್ಲಿ ನನ್ನ ತಂದೆ ಪಡೆದ ಸಾಲವನ್ನು ತೀರಿಸಿರುತ್ತಾರೆ ಎಂದರೆ ಸರಿ . ಆ ಬಗ್ಗೆ ಎರಡು ರಶೀದಿಗಳನ್ನು ತೋರಿಸುತ್ತಿದ್ದು ಸಾಕ್ಷಿಯು ಒಪ್ಪಿದ್ದರಿಂದ ಅವುಗಳನ್ನು ನಿಡಿ 5 ಮತ್ತು 6 ಎಂದು ಗುರುತಿಸಲಾಯಿತು. ಸಾಕ್ಷಿಯ ತಂದೆಯ ಸಹಿಗಳನ್ನು ನಿಡಿ 5 ಎ ಮತ್ತು ನಿಡಿ 6 ಎ ಎಂದು ಗುರುತಿಸಲಾಯಿತು. ದಿ ಃ 12.04.1985 ರಲ್ಲಿ ಸಿಐಟಿ ರವರು ನನ್ನ ತಂದೆಗೆ ಒಂದು ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಆ ಬಗ್ಗೆ ದಾಖಲೆ ತೋರಿಸಲಾಗಿ ಅದನ್ನು ಒಪ್ಪಿದ್ದರಿಂದ ಸದರಿ ದಾಖಲೆಯನ್ನು ನಿಡಿ 7 ಎಂದು ಗುರುತಿಸಲಾಯಿತು. ಸಾಕ್ಷಿಯು ಸಹಿಯನ್ನು ಗುರುತಿಸಿರುವುದಿಲ್ಲ. ಪುನಃ ಗುರುತಿಸಿರುತ್ತಾರೆ ಸಹಿಯನ್ನು ನಿಡಿ 7 ಎ ಎಂದು ಗುರುತಿಸಲಾಯಿತು. ದಿ ಃ 15.04.1997 ರಲ್ಲಿ ಡಿ ಆರ್ ಕೃಷ್ಣ ಪ್ರಸಾದ್ ರವರ ಹೆಸರಿಗೆ ಖಾತಾ ವರ್ಗಾವಣೆಯಾಗಿದೆ ಎಂದರೆ ಸರಿಯಲ್ಲ. ಕೃಷ್ಣ ಪ್ರಸಾದ್ ರವರ ಹೆಸರಿಗೆ ಖಾತಾವಾದ ವಿಷಯ ಗೊತ್ತಿಲ್ಲ . ಈಗ ದಾವಾ ಆಸ್ತಿಯ ಖಾತಾ ಯಾರ ಹೆಸರಿಗೆ ಬರುತ್ತಿದೆ ಎಂದು ನನಗೆ ಗೊತ್ತಿಲ್ಲ . ಕೃಷ್ಣ ಪ್ರಸಾದ್‌ರವರು ರಘುನಂದನ್‌ರವರಿಗೆ ದಾನವನ್ನು ಮಾಡಿರುತ್ತಾರೆ . ಸಾಕ್ಷಿಯು ತಾನು ನೋಟೀಸ್ ಕೊಟ್ಟ ಮೇಲೆ ಮಾಡಿರುತ್ತಾರೆ ಎಂದು ಹೇಳುತ್ತಾರೆ. ದಾನಪತ್ರದ ಪ್ರಕಾರ

ರಘುನಂದನ್‌ರವರ ಹೆಸರಿಗೆ ಖಾತಾ ವರ್ಗಾವಣೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲೆ ತೋರಿಸಿ ಕೃಷ್ಣ ಪ್ರಸಾದ್‌ರವರು ರಘುನಂದನ್‌ರವರಿಗೆ ಮಾಡಿದ ದಾನ ಪತ್ರ ಇದೆ ಎಂದು ಕೇಳಲಾಗಿ ಸಾಕ್ಷಿಯು ಗುರುತಿಸಿರುವುದಿಲ್ಲ ಎಂದು ಹೇಳುತ್ತಾರೆ.

ನನ್ನ ತಂದೆ ತೀರಿಕೊಂಡ ನಂತರ ಅವರ ತಿಥಿಯನ್ನು ನಾಸಿಕ್‌ನಲ್ಲಿ ಮಾಡಿರುತ್ತಾರೆ. ಸಾಕ್ಷಿಗೆ ದಿ ಃ 08.09.1995 ರ ದಾಖಲೆಯನ್ನು ತೋರಿಸಿ ಅದರ ಮೇಲಿರುವ ಸಹಿಯು ಅವರ ತಂದೆಯ ಸಹಿಯೆಂದು ತೋರಿಸಲಾಗಿ ಸಾಕ್ಷಿಯು ಅದನ್ನು ಅಲ್ಲಗೆಳೆಯುತ್ತಾರೆ ಅದರಂತೆ ಅದು ಸಾಕ್ಷಿಯ ತಂದೆಯವರು ಮಾಡಿರುವ ವಿಲ್‌ನ ಮೇಲೆ ಇರುವ ಸಹಿಯಂಥ ಸೂಚಿಸಲಾಗಿ ಸಾಕ್ಷಿಯು ಅಲ್ಲ ಎಂದು ಹೇಳಿರುತ್ತಾರೆ.

ನಿಡಿ 3 ಮತ್ತು 4 ರಲ್ಲಿರುವ ಬರಹ ನಿಮ್ಮ ತಂದೆಯದು ಎಂದು ಸೂಚಿಸಲಾಗಿ ಸಾಕ್ಷಿಯು ಅದನ್ನು ನೋಡಿ ಓದಿ ಗುರುತಿಸಿರುತ್ತಾರೆ . ಆದರೆ ಸದರಿ ದಾಖಲೆಯಲ್ಲಿರುವ ಕೈಬರಹ ಮತ್ತು ಮೇಲೆ ಹೇಳಿದ ವಿಲ್ ನಲ್ಲಿರುವ ಕೈಬರಹ ನನ್ನ ತಂದೆಯದು ಎಂದರೆ ಸರಿಯಲ್ಲ. ಸದರಿ ಕೈಬರಹ ನನ್ನ ತಂದೆಯದು ಇದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ 11 ದಿವಸದ ತಿಥಿಗೆ ನನ್ನ ತಂಗಿ ಕುಮುದಿನಿಯನ್ನು ಹೊರತು ಪಡಿಸಿ ಎಲ್ಲರೂ ಬಂದಿದ್ದರು . ಆ ದಿವಸ ನನ್ನ ತಂದೆಯ ಸ್ನೇಹಿತ ಅನಂತರಾವ್ ರವರು ಕೂಡ ಇದ್ದರು ಎಂದರೆ ಸರಿ . ಸಾಕ್ಷಿಯು ತಂದೆಯ ವೆಲ್ ವಿಷರ್ ಎಂದು ಹೇಳುತ್ತಾರೆ. ತಿಥಿ ದಿವಸ ಮುಗಿದ ನಂತರ ಸದರಿ ವಿಲ್ ನ್ನು ಓದಿ ಹೇಳಿರುತ್ತಾರೆ ಎಂದರೆ

Os No. 2749/2013
PW 1

ಸಾಕ್ಷಿಯು ನಾನು ಇರಲಿಲ್ಲ ಎಂದು ಹೇಳುತ್ತಾರೆ. ಸದರಿ ವಿಲ್ ಇದ್ದ ಬಗ್ಗೆ ಗೊತ್ತಿಲ್ಲ ನನಗೆ ಕೊಟ್ಟಿಲ್ಲ ನಾನು ಓದಿರುವುದಿಲ್ಲ.

ನನ್ನ ಅಣ್ಣ ಕೃಷ್ಣ ಪ್ರಸಾದ್‌ರವರ ಹೆಸರಿಗೆ ಖಾತೆ ಮಾಡಿಕೊಳ್ಳಲು ನಾವೆಲ್ಲಾ ಅಕ್ಕ ತಂಗಿಯರು ಪ್ರಮಾಣ ಪತ್ರವನ್ನು ಬಿಬಿಎಂಪಿಗೆ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಸಹೋದರಿಯರ ಸಹಿಗಳನ್ನು ಗುರುತಿಸಲು ಆಗುವುದಿಲ್ಲ . ದಿ : 04.03.1997 ರಲ್ಲಿ ಮಹಾಲಕ್ಷ್ಮಿ ನೋಟರಿಯವರ ಮುಂದೆ ನಾವೆಲ್ಲಾ ಸಹೋದರಿಯರು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ಮರೆಮಾಚಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲು :

ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಖ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಮತ್ತು ಸ. ಇ

(ಸಿ ಡಿ ಕರೋಶಿ)
5 ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ನ್ಯಾಯಾಂಗಣ 13, ಬೆಂಗಳೂರು ನಗರ .